**(ಸ್ವಾಮಿ ಅಖಂಡಾನಂದ:** ಹೌದು. ಸ್ವಾಮೀಜಿಯ ದೇಹತ್ಯಾಗದ ನಂತರವೂ ನಾನವರನ್ನು ಸ್ಪಷ್ಟವಾಗಿ ನೋಡಿದ್ದೇನೆ, ಈಗ ನಿನ್ನನ್ನು ನೋಡುತ್ತಿರುವಂತೆಯೇ ನೋಡಿದ್ದೇನೆ. ಇಲ್ಲವಾದರೆ ನಾನು ಜೀವಂತವಾಗಿರುತ್ತಿರಲಿಲ್ಲ. ವಿಯೋಗವು ಎಷ್ಟು ದುಃಖಕರವಾಗಿತ್ತೆಂದರೆ ನಾನು ಆತ್ಮಹತ್ಯೆ ಮಾಡಿಕೊಳ್ಳಲೆಂದು ಚಲಿಸುತ್ತಿದ್ದ ಟ್ರಾಮ್‌ನ ಕೆಳಗೆ ಧುಮುಕಲು ಹೊರಟಿದ್ದೆ. ಸ್ವಾಮೀಜಿ ನನ್ನ ಕೈಹಿಡಿದು ತಡೆದರು.)

**Miss. Mac L:  :** Yes he lives in you, in me, in all. He cannot die. He is Atman. They say Swamiji was a great teacher, but I and many others knew him to be a great learner. He learnt from all, so he conquered all. He would learn something always, so he was always fresh, never monotonous – never repeating the same thing.

**(ಮಿಸ್. ಮ್ಯಾಕ್‌ಲೌಡ್:** ಹೌದು, ಅವರು ನಿಮ್ಮೊಳಗೆ, ನನ್ನೊಳಗೆ ಎಲ್ಲರೊಳಗೆ ಇದ್ದಾರೆ. ಅವರಿಗೆ ಸಾವಿಲ್ಲ – ಅಮರ ಆತ್ಮರು. ಜನರು ಸ್ವಾಮೀಜಿಯವರೊಬ್ಬರು ದೊಡ್ಡ ಗುರುಗಳೆಂದು ಹೇಳುತ್ತಾರೆ, ಆದರೆ ಅವರೊಬ್ಬ ದೊಡ್ಡ ವಿದ್ಯಾರ್ಥಿ. ಅವರು ಎಲ್ಲರಿಂದಲೂ ಕಲಿಯುತ್ತಿದ್ದರು. ಆದ್ದರಿಂದಲೇ ಅವರು ಎಲ್ಲರ ಮನಸ್ಸನ್ನೂ ಗೆದ್ದಿದ್ದರು. ಸರ್ವದಾ ಅವರು ಒಂದಲ್ಲ ಒಂದು ವಿಷಯವನ್ನು ಕಲಿತುಕೊಳ್ಳುತ್ತಿದ್ದರು. ಆದ್ದರಿಂದಲೇ ಅವರು ಚಿರನೂತನರಾಗಿದ್ದಾರೆ, ಎಂದೂ ಏಕಸ್ವರವುಳ್ಳವರಾಗಿರಲಿಲ್ಲ – ಒಂದೇ ವಿಷಯವನ್ನು ಒಂದೇ ರೀತಿಯಲ್ಲಿ ಎಂದಿಗೂ ಹೇಳುತ್ತಿರಲಿಲ್ಲ.)

**Swami A :** Yes, that is the teaching of our Guru Maharaj. On his deathbed, unable to speak because of throatsore, he violently protested against somebody saying 'I know'… … He said, 'you know! What do you know of the infinite ? Don't say this again, say, 'Friend, so long as I live, I learn.' That is what he taught and what we learnt.

**(ಸ್ವಾಮಿ ಅಖಂಡಾನಂದ:** ಹೌದು. ನಮಗೆ ನಮ್ಮ ಗುರು ಮಹಾರಾಜರು ಈ ಶಿಕ್ಷಣವನ್ನೇ ಕೊಟ್ಟಿದ್ದರು. ಮರಣಶಯ್ಯೆಯಲ್ಲಿದ್ದಾಗ ಗಂಟಲು ನೋವಿನಿಂದಾಗಿ ಅವರಿಗೆ ಮಾತನಾಡಲು ಆಗುತ್ತಿರಲಿಲ್ಲ. ಆಗ ಒಬ್ಬನು 'ನನಗೆ ಗೊತ್ತು…' ಎಂದಾಕ್ಷಣವೇ ಠಾಕೂರರೆಂದರು 'ಏನು ಗೊತ್ತು? ಇನ್ನೆಂದೂ ಹಾಗೆನ್ನಬೇಡ. ಗೆಳೆಯ, ಬದುಕಿರುವವರೆಗೂ ನಾನು ಕಲಿಯುತ್ತೇನೆ.' ಅವರು ನಮಗೆ ಅದನ್ನೇ ಕಲಿಸಿದ್ದರು, ನಾವೂ ಅದನ್ನೇ ಕಲಿತೆವು.)

**Ms. Mac L.:** Give me your message for the coming Centenary. They want it.

**(ಮಿಸ್. ಮ್ಯಾಕ್‌ಲೌಡ್:** ಬರಲಿರುವ ಶ್ರೀರಾಮಕೃಷ್ಣ ಜನ್ಮಶತಾಬ್ಧಿ ಸಂಚಿಕೆಗೆ ನಿಮ್ಮ ಸಂದೇಶವನ್ನು ನೀಡಿ. ಅವರಿಗದು ಬೇಕು)

**Sw. A:** I have no measage of mine own, but I have got this message from the Lord. 'I am Infinite and Eternal. What is my Centenary?' (ನನ್ನದೇ ಆದ ಸಂದೇಶವೇನೂ ಇಲ್ಲ. ಆದರೆ ನಾನು ಭಗವಂತನಿಂದ ಈ ಸಂದೇಶವನ್ನು ಪಡೆದಿದ್ದೇನೆ – 'ನಾನೇ ಅನಾದಿ, ಅನಂತ. ಹೀಗಿರುವಾಗ ನನ್ನ ಶತಾಬ್ದಿ ಎಂದರೇನು?')

**Miss. Mac L:** All right. I shall take this message with me. (ಸರಿ. ನಾನು ಈ ಸಂದೇಶವನ್ನೇ ತೆಗೆದುಕೊಂಡು ಹೋಗುತ್ತೇನೆ.)

ದಿನವಿಡೀ ಅಲ್ಲೇ ಇದ್ದು ಸ್ವಾಮೀಜಿ ಸಂಬಂಧವಾಗಿ ನಾನಾ ವಿಷಯಗಳನ್ನು ಮಾತನಾಡುತ್ತ ಈ ೮೦ ವಯಸ್ಸಿನ ವೃದ್ಧೆಯು ಆಶ್ರಮವನ್ನು ತರುಣಿಯ ಉತ್ಸಾಹದಿಂದ ಹಾಗೂ ಪ್ರೇಮಪೂರಿತ ದೃಷ್ಟಿಯಿಂದ ಕಾಣತೊಡಗಿದರು.

ದೇಗುಲದ ಗರ್ಭಗೃಹದ ವೇದಿಕೆಯಲ್ಲಿ ಸ್ವಾಮೀಜಿಯ ಒಂದು ಸ್ಫಟಿಕದ ಮೂರ್ತಿ (ಪರಿವ್ರಾಜಕ ವೇಷದಲ್ಲಿ)ಯನ್ನು ನೋಡಿ ಅವರು ಬಹಳ ಸಂತೋಷಗೊಂಡರು. ಅದು ಆಕೆಯ ನಿರ್ದೇಶನದಂತೆಯೇ ತಯಾರಿಸಿದ ಒಂದು ಕೊಡುಗೆಯಾಗಿತ್ತು.

**Miss. Mac L:** Yes, nothing but crystal can represent Swamiji. (ಸ್ವಾಮೀಜಿಯವರನ್ನು ಸ್ಫಟಿಕವಲ್ಲದೆ ಮತ್ತೇನೂ ಪ್ರತಿನಿಧಿಸಲಾರದು.)

ಸ್ವಾಮೀಜಿಯ ಉಜ್ವಲತೆ ಹಾಗೂ ಪರಿಶುದ್ಧತೆಯನ್ನು ಪರಿಗಣಿಸಿಯೇ ಆಕೆ ಈ ಮಾತುಗಳನ್ನು ಹೇಳಿದ್ದರೆನ್ನಿಸುತ್ತದೆ. ಹೀಗೆ ಇಂಥ ಅನೇಕ ವಿಷಯಗಳ ಬಗ್ಗೆ ಮಾತನಾಡಿ ಸಂಜೆಯ ರೈಲುಗಾಡಿಯಲ್ಲಿ ಎಲ್ಲರೂ ಹೊರಟುಹೋದರು. ಹೋಗುವಾಗ Ady ಹೇಳಿದರು, 'Saragachi is an oasis in the midst of a desert.' (ಸಾರಗಾಛಿಯು ಮರುಭೂಮಿಯ ಮಧ್ಯದಲ್ಲಿ ಒಂದು ಉದ್ಯಾನ.)

*(ಮುಂದುವರಿಯುವುದು)* *

ಚಂಡಮಾರುತ ಅಪ್ಪಳಿಸಿದಾಗ ಜನರಿಗೆ ಗಾಬರಿಯಾಗುವುದು. ಅಂಥ ವೇಳೆ ಸಮಾಧಾನದಿಂದಿರಬೇಕು. ಅದೇರೀತಿ ಮನಸ್ಸಿನಲ್ಲೂ ಬಿರುಗಾಳಿಯೇಳುವುದುಂಟು. ಆಗ ಯಾರು ಮನಸ್ಸನ್ನು ಸ್ಥಿರವಾಗಿ ಭಗವಂತನಲ್ಲೇ ನೆಲೆನಿಲ್ಲಿಸುವರೋ, ಆಗ ಬಿರುಗಾಳಿ ಏನೂ ಮಾಡದು. ಪೂರ್ಣ ಮನಸ್ಸಿನಿಂದ ಭಗವಂತನಲ್ಲಿ ಶರಣಾಗು. ಬಿರುಗಾಳಿ ಶಾಶ್ವತವೇನಲ್ಲ. ಮತ್ತೆ ಒಳ್ಳೆಯ ಭಾವನೆಗಳು ಬರುವವು; ಮತ್ತೆ ನಿನ್ನ ಮನಸ್ಸಿನಲ್ಲಿ ಶಾಂತಿ ನೆಲೆಸುವುದು. ಶಾಂತಿಯ ಮೂರ್ತರೂಪವಾದ ಭಗವಂತನನ್ನು ಮಾತ್ರ ಎಂದಿಗೂ ಬಿಟ್ಟುಬಿಡಬೇಡ.

**–ಸ್ವಾಮಿ ತುರೀಯಾನಂದ**

*('Spiritual Treasures' ಗ್ರಂಥದಿಂದ)*

ಸ್ವಾಮಿ ನಿತ್ಯಸ್ಥಾನಂದ

# ವಿಶ್ವರೂಪದರ್ಶನ




ಪ್ರತಿಯೊಂದಕ್ಕೂ ವ್ಯಕ್ತ ಮತ್ತು ಅವ್ಯಕ್ತ ಎಂಬ ಎರಡು ರೂಪಗಳಿರುತ್ತವೆ. ಇಂದ್ರಿಯ ಮನಸ್ಸುಗಳಿಗೆ ಗೋಚರವಾದುದು ವ್ಯಕ್ತ, ಗೋಚರವಾಗದುದು ಅವ್ಯಕ್ತ. ಬೀಜವು ವ್ಯಕ್ತ ರೂಪ, ಅದರಲ್ಲಿ ಸುಪ್ತವಾಗಿರುವ ಮರ ಅವ್ಯಕ್ತರೂಪ. ಸಂಗೀತವು ವ್ಯಕ್ತವಾದ ಸ್ಥೂಲ ಸ್ಪಂದನ, ಅದರ ಹಿಂದೆ ಅವ್ಯಕ್ತವಾದ ಸೂಕ್ಷ್ಮ ಸ್ಪಂದನಗಳಿರುತ್ತವೆ. ನಾವಾಡುವ ಮಾತು ವ್ಯಕ್ತರೂಪ, ಅದರ ಹಿಂದೆ ಅವ್ಯಕ್ತ ಭಾವನೆಗಳಿರುತ್ತವೆ. ಪ್ರಪಂಚವು ವ್ಯಕ್ತರೂಪ, ಇದು ಲೀಲೆ. ಇದರ ಹಿಂದೆ ಅವ್ಯಕ್ತ ಸತ್ಯವಿದೆ, ಅದನ್ನು ನಿತ್ಯ ಎನ್ನುತ್ತಾರೆ. ನಿತ್ಯದ ಇನ್ನೊಂದು ರೂಪವೇ ಲೀಲೆ. ಬೀಜವು ತಾನು ನಾಶವಾಗಿ, ತಾನಾಗಿಯೇ ಮರವಾಗುತ್ತದೆ. ಮಣ್ಣು ತಾನು ನಾಶವಾಗದೆಯೇ ಮಡಕೆಯಾಗುತ್ತದೆ, ಆದರೆ ಇನ್ನೊಬ್ಬರ ಸಹಾಯದಿಂದ. ಸಮುದ್ರವು ತಾನು ನಾಶವಾಗದೆ, ತಾನಾಗಿಯೇ ಅಲೆಗಳಾಗುತ್ತದೆ. ಹೀಗೆ ಭಗವತ್ ಸತ್ಯವು ತಾನಾಗಿಯೇ, ತನ್ನನ್ನು ಕಳೆದುಕೊಳ್ಳದೆ ಪ್ರಪಂಚವಾಗಿ ಕಾಣಿಸಿಕೊಳ್ಳುತ್ತದೆ. ಇದನ್ನೇ ಲೀಲೆ ಎಂದು ಕರೆಯುವುದು.

ಸಮುದ್ರವು ಅಲೆಗಳಾದಾಗ ನೀರಿನ ಸ್ವರೂಪದಲ್ಲಿ ಯಾವ ಬದಲಾವಣೆಯೂ ಉಂಟಾಗುವುದಿಲ್ಲ. ಆದರೆ ನಮ್ಮ ಭಗವತ್ ಕಲ್ಪನೆಗೂ ಕಾಣುವ ವಿಶ್ವಕ್ಕೂ ಯಾವ ಹೊಂದಾಣಿಕೆಯೂ ಇಲ್ಲ. ಈ ಪ್ರಪಂಚ ದ್ವಂದ್ವಮಯ, ಆದರೆ ಭಗವಂತನಲ್ಲಿ ಯಾವ ದ್ವಂದ್ವವನ್ನೂ ನಾವು ಕಾಣುವಂತಿಲ್ಲ. ರೌದ್ರ-ಸೌಮ್ಯ, ಹುಟ್ಟು-ಸಾವು, ಒಳಿತು-ಕೆಡುಕು, ಪಾಪ-ಪುಣ್ಯ, ಸುಖ-ದುಃಖ - ಇವೇ ಮುಂತಾದ ದ್ವಂದ್ವಗಳನ್ನು ಜಗತ್ತಿನೆಲ್ಲೆಲ್ಲಿಯೂ ಕಾಣುತ್ತೇವೆ. ಆದರೆ ಈ ದಂದ್ವಗಳು ವ್ಯಕ್ತಿನಿಷ್ಠವಾದುದು - ಜಗತ್ತು ಒಳಿತೂ ಅಲ್ಲ, ಕೆಡಕೂ ಅಲ್ಲ. ಗಾಳಿಯು ಮಂದವಾಗಿ ಬೀಸಿದರೆ ಸುಖ, ಬಿರುಗಾಳಿಯಾದರೆ ದುಃಖ. ಮನುಷ್ಯನು ಸಣ್ಣ ಪ್ರಾಣಿಗಳಿಗೆ ದೈತ್ಯನಾಗಿ ಕಾಣುತ್ತಾನೆ, ನಮಗೆ ಮನ್ಮಥನಾಗಿ ಕಾಣಿಸಬಹುದು. ಭೂಕಂಪವು ನಿರ್ಜನ ಪ್ರದೇಶದಲ್ಲಾದರೆ ಅದೊಂದು ಅನಾಹುತವೇ ಅಲ್ಲ, ಅದೊಂದು ಸುದ್ದಿಯೇ ಆಗುವುದಿಲ್ಲ. ಅದೇ ಜನನಿಬಿಡ ಪ್ರದೇಶದಲ್ಲಾದರೆ ಅದೊಂದು ದೊಡ್ಡ ಅನಾಹುತವಾಗುತ್ತದೆ, ಪ್ರಕೃತಿವಿಕೋಪವಾಗುತ್ತದೆ.

ಸೃಷ್ಟಿ ಮತ್ತು ನಾಶ ಬೇರೆಬೇರೆಯಲ್ಲ, ಇದೊಂದು ಅವಸ್ಥಾಂತರ ಅಷ್ಟೇ. ಪ್ರತಿಕ್ಷಣವೂ ಜನನ-ಮರಣ ನಡೆಯುತ್ತಿದೆ. ಪ್ರತಿಕ್ಷಣವೂ ಹಳೆಯ ಜೀವಾಣುಗಳು ನಾಶವಾಗಿ ಹೊಸ ಜೀವಾಣುಗಳು ಹುಟ್ಟುತ್ತವೆ. ಇದೇ ದೈಹಿಕ ಬೆಳವಣಿಗೆ. ಹಳೆಯ ಸಂಸ್ಕಾರಗಳನ್ನು ನಾಶ ಮಾಡದೆ ನಾವು ಉತ್ತಮರಾಗಲಾರೆವು. ಹಳೆಯ ಪದ್ಧತಿ ಸಂಪ್ರದಾಯಗಳನ್ನು ನಾಶಮಾಡದೆ ಸಮಾಜ ಮುಂದುವರಿಯಲಾಗದು. ರುದ್ರನ ಋಣ ತೀರಿಸದೆ ವಿಷ್ಣುವಿನ ನಿಯಮವನ್ನು ಉಳಿಸಿಕೊಳ್ಳಲಾಗದು ಎಂದು ಶ್ರೀಅರವಿಂದರು ಹೇಳುತ್ತಾರೆ. ನಾಶವೇ ಪ್ರಗತಿಯ ಮೊದಲ ನಿಯಮ ಎಂದು ಅವರು ಸಾರುತ್ತಾರೆ. ನಮ್ಮ ದೇಹದೊಳಗೆ ನಿರಂತರ ಯುದ್ಧ ನಡೆಯುತ್ತಿರುವುದರಿಂದಲೇ ನಾವು ಬದುಕಿರುವುದು. ಯುದ್ಧವೇ ಎಲ್ಲದರ ತಂದೆ, ಎಲ್ಲದರ ರಾಜ ಎಂದು ಗ್ರೀಕ್ ತತ್ತ್ವಜ್ಞಾನಿ ಹಿರಾಕ್ಲಿಟಸ್ ಹೇಳುತ್ತಾನೆ. ಹಾಗಾದರೆ ಯುದ್ಧವನ್ನು ನಾವು ಸಮರ್ಥಿಸಬೇಕೇ? ಆವುಗಳನ್ನು ಅನುಮೋದಿಸಬೇಕೇ? ಇಲ್ಲ, ಅವುಗಳ ವಿರುದ್ಧ ಹೋರಾಡಬೇಕು.

ಪರಸ್ಪರ ವಿರುದ್ಧಾಂಶಗಳು ಸೇರಿಯೇ ಈ ವಿಶ್ವ ಉಂಟಾಗಿರುವುದು, ಇದಿಲ್ಲದಿದ್ದರೆ ವಿಶ್ವವೇ ಇರುವುದಿಲ್ಲ. ವಿರೋಧಗಳ ಹೋರಾಟದಿಂದ ವಿರೋಧಗಳನ್ನು ಮೀರಿ ಹೋಗಬೇಕು. ಧರ್ಮ ಮತ್ತು ಅಧರ್ಮಗಳ ಯುದ್ಧದಲ್ಲಿ ಕೊನೆಗೆ ಧರ್ಮಕ್ಕೆ ಜಯ ಎಂದು ಸಾಮಾನ್ಯವಾಗಿ ಹೇಳುತ್ತೇವೆ. ನಿಜಾಂಶವೇನೆಂದರೆ ಒಮ್ಮೆ ಅದಕ್ಕೆ ಜಯ, ಒಮ್ಮೆ ಇದಕ್ಕೆ ಜಯ - ಇದೇ ಜಗತ್ತು. ನಾವು ಇವೆರಡನ್ನು ಮೀರಿಹೋಗಬೇಕು. ಶ್ರೀಅರವಿಂದರು ಹೇಳುತ್ತಾರೆ: ಜಗತ್ತಿನಲ್ಲಿ ಕಾಣುವ ವೈರುಧ್ಯಗಳು ಭಗವಂತನಿಗೇ ಸೇರಿದವು. ಅವುಗಳನ್ನು ಸ್ವೀಕರಿಸಿ, ಅವುಗಳ ಮೂಲಕವೇ ನಾವು ಮುಂದುವರಿದು ದಿವ್ಯ ಸಾಮರಸ್ಯವನ್ನು, ಪರಮ ಸಮತ್ವವನ್ನು ತಲುಪಬೇಕು. ಇದೇ ಭಗವಂತನ ಅತೀತ, ಅನಂತ, ನೆನೆಸಿಕೊಂಡರೇ ಮೈ ನವಿರೇಳುವ ಪರಮಾನಂದದ ಸ್ಥಿತಿ.

ಒಳಿತು-ಕೆಡುಕು, ದೇವರು-ಸೈತಾನ, ದೇವ-ಅಸುರ - ಇವೆಲ್ಲವೂ ಭಗವತ್ ಶಕ್ತಿಯ ವಿವಿಧ ಅಭಿವ್ಯಕ್ತಿಗಳು. ಸ್ವಾಮಿ ವಿವೇಕಾನಂದರು ಹೇಳುವಂತೆ, ಇರುವುದು ಒಂದೇ ಶಕ್ತಿ - ಇದೇ ಒಳಿತು ಕೆಡಕುಗಳಾಗಿ ಅಭಿವ್ಯಕ್ತವಾಗುತ್ತಿರುವುದು. ದೇವರು ಮತ್ತು ಸೈತಾನರು ವಿರುದ್ಧ ದಿಕ್ಕಿನಲ್ಲಿ ಹರಿಯುತ್ತಿರುವ ಒಂದೇ ನದಿ. ಅವರೇ ಇನ್ನೊಂದು ಕಡೆ ಹೇಳುತ್ತಾರೆ: ನಾನೆ ಕ್ರಿಸ್ತ, ನಾನೆ ಜುಡಾಸ್ ಎಂದು. (ಜುಡಾಸ್ ಎಂಬುವವನು ಕ್ರಿಸ್ತನ ಶಿಷ್ಯರಲ್ಲಿ ಒಬ್ಬ. ಕ್ರಿಸ್ತನಿಗೇ ಮೋಸಮಾಡಿ ಅವನನ್ನು ಸೆರೆ ಹಿಡಿಯುವುದಕ್ಕೆ ಸಹಾಯ ಮಾಡಿದ ಮಹಾಪಾಪಿ). ಅವರ ಈ ಕೆಳಗಿನ ಮಾತು ಅತ್ಯಂತ ರೋಮಾಂಚಕಾರಿಯಾಗಿದೆ: ಬೀದಿಯಲ್ಲಿರುವ ಮಹಿಳೆ, ಜೈಲಿನಲ್ಲಿರುವ ಕಳ್ಳ-ಇವರೆಲ್ಲ ನೀವು ಒಳ್ಳೆಯವರಾಗಿರಲೆಂದು

ಬಲಿಪಶುಗಳಾಗಿರುವ ಕ್ರಿಸ್ತರು. ಇದೇ ಸಮತೋಲನದ ನಿಯಮ. ಎಲ್ಲ ಕಳ್ಳರೂ ಕೊಲೆಗಡುಕರೂ, ಎಲ್ಲ ಅನ್ಯಾಯವಂತರೂ ದುರ್ಬಲರೂ ದುರಾಚಾರಿಗಳೂ ಸೈತಾನರೂ ಎಲ್ಲರೂ ನನ್ನ ಕ್ರಿಸ್ತರು.

ಹತ್ತನೆಯ ಅಧ್ಯಾಯದಲ್ಲಿ ಮುಖ್ಯವಾಗಿ ವಿಶೇಷ ಶಕ್ತಿಯ ಆವಿರ್ಭಾವದಲ್ಲಿ ಭಗವಂತನನ್ನು ಕಾಣಬೇಕೆಂದು ಹೇಳಿದ್ದಾಯಿತು. ಹನ್ನೊಂದನೆಯ ಅಧ್ಯಾಯದಲ್ಲಿ ಇಡೀ ವಿಶ್ವವನ್ನೇ ಭಗವತ್ ಸ್ವರೂಪವಾಗಿ ಕಾಣಬೇಕೆಂಬ ಅಭಿಪ್ರಾಯ ವ್ಯಕ್ತವಾಗಿದೆ. ನಾವು ಜಗತ್ತನ್ನು ಅದು ಇರುವಂತೆಯೇ ಸ್ವೀಕರಿಸಬೇಕು. ಕೆಡುಕನ್ನು ಕಳೆದು ಒಳಿತನ್ನು ಸ್ವೀಕರಿಸಿದರೆ ಆಗದು, ರೌದ್ರವನ್ನು ಕಳೆದು ಸೌಮ್ಯವನ್ನು ಸ್ವೀಕರಿಸಿದರೆ ಆಗದು, ಕಷ್ಟವನ್ನು ಕಳೆದು ಸುಖವನ್ನು ಮಾತ್ರ ಸ್ವೀಕರಿಸಿದರೆ ಆಗದು. ಶ್ರೀ ರಾಮಕೃಷ್ಣರು ತಮಗಾದ ಒಂದು ದಿವ್ಯ ದರ್ಶನವನ್ನು ವರಿಸುತ್ತಾರೆ: ಒಬ್ಬ ಸುಂದರ ಮಹಿಳೆ ಒಂದು ಮುದ್ದಾದ ಮಗುವಿಗೆ ಜನ್ಮ ನೀಡುತ್ತಾಳೆ. ಆ ಮಗುವನ್ನು ತೊಡೆ ಮೇಲಿರಿಸಿ ಹಾಲುಣಿಸಿ, ಮುದ್ದಿಸಿ ಆನಂದಪಡುತ್ತಾಳೆ. ಮರುಕ್ಷಣದಲ್ಲೇ ವಿಕಾರರೂಪವನ್ನು ಪಡೆಯುತ್ತಾಳೆ, ವಿಕೃತ ಅಟ್ಟಹಾಸವನ್ನು ಮಾಡುತ್ತಾಳೆ. ತಾನೇ ಹೆತ್ತ ಮಗುವನ್ನು ಕಚ ಕಚ ತಿಂದು ಚಪ್ಪರಿಸುತ್ತಾಳೆ. ಇದೇ ಜಗತ್ತು. ಸೂರ್ಯನಿಂದಲೇ ಭೂಮಿ ಹುಟ್ಟುತ್ತದೆ ಮತ್ತು ಸೂರ್ಯನೇ ಈ ಭೂಮಿಯನ್ನು ಪೋಷಿಸುತ್ತಿರುವುದು. ಮುಂದೆ ಈ ಸೂರ್ಯನೇ ಈ ಭೂಮಿಯನ್ನು ನುಂಗಿ ಹಾಕುತ್ತಾನೆ. ಒಂದು ಧೂಮಕೇತುವು ಬಂದು ಭೂಮಿಗೆ ಹೊಡೆದರೆ ಸಾಕು, ಇದು ಅಲ್ಲೋಲ ಕಲ್ಲೋಲವಾಗುತ್ತದೆ, ಎಲ್ಲ ಜೀವ ಜಂತುಗಳೂ ನಾಶವಾಗಬಹುದು. ಭಗವಂತನಿಗೆ ಗ್ರಹನಕ್ಷತ್ರಗಳೆಲ್ಲ ಚೆಂಡುಗಳಿದ್ದಂತೆ, ಅವನು ಚೆಂಡಾಟ ಆಡುತ್ತಿರುವನು. ಅವನಿಗೆ ಚೆಂಡಾಟ, ನಮಗೆ ಗೋಳಾಟ ಎಂದು ನಮಗನಿಸಬಹುದು. ನಾವು ನಮ್ಮ ದೃಷ್ಟಿಯಿಂದ, ಸೀಮಿತ ದೃಷ್ಟಿಯಿಂದ ಮಾತ್ರ ನೋಡುತ್ತೇವೆ. ಆದರೆ ಪೂರ್ಣದೃಷ್ಟಿಯಿಂದ ನೋಡಿದರೆ ಎಲ್ಲವೂ ಅರ್ಥಪೂರ್ಣವಾಗುತ್ತದೆ. ಅನೇಕ ಕೇಂದ್ರಗಳಿರುವ ಒಂದು ದೊಡ್ಡ ಸಂಸ್ಥೆ ಇದೆ ಎಂದಿಟ್ಟುಕೊಳ್ಳೋಣ. ಶಾಖಾಕೇಂದ್ರದವರಿಗೆ ತಮ್ಮ ಕೇಂದ್ರದ ಸಮಸ್ಯೆಗಳೇ ಬಹಳ ಪ್ರಧಾನವಾಗಿ ಕಂಡುಬರುತ್ತದೆ. ಆದರೆ ಪ್ರಧಾನ ಕೇಂದ್ರದವರು ಒಟ್ಟು ಸಂಸ್ಥೆಯ ದೃಷ್ಟಿಯಿಂದ ನೋಡುತ್ತಾರೆ, ಶಾಖಾಕೇಂದ್ರದ ಸಮಸ್ಯೆಗಳು ಅವರಿಗೆ ಗೌಣ. ಆದರೆ ಶಾಖಾಕೇಂದ್ರದವರು ಪ್ರಧಾನಕೇಂದ್ರದವರು ನಮಗೆ ಗಮನವನ್ನೇ ಕೊಡುತ್ತಿಲ್ಲ ಎಂದು ದೂರಬಹುದು. ನಾವು ವೈಯಕ್ತಿಕ, ಸಂಕುಚಿತ ದೃಷ್ಟಿಯಿಂದ ನೋಡುವುದರಿಂದಲೇ ಅನೇಕ ವಿಷಯಗಳು ನಮ್ಮ ಮೇಲೆ ಪರಿಣಾಮವನ್ನು ಉಂಟುಮಾಡುತ್ತವೆ. ನಮ್ಮ ದೃಷ್ಟಿ ವಿಶಾಲವಾಗಬೇಕು, ಭೂಮವಾಗಬೇಕು. ಆದ್ದರಿಂದಲೇ ಉಪನಿಷತ್ತು ಹೇಳುತ್ತದೆ: **ಭೂಮಾದ್ವೈವ ಸುಖಂ ಭವತಿ ನಾಲ್ಪೇ ಸುಖಮಸ್ತಿ** – ಭೂಮದಲ್ಲಿ ಮಾತ್ರ ಸುಖ, ಅಲ್ಪದಲ್ಲಿ ಸುಖವಿಲ್ಲ. ಭೂಮದೃಷ್ಟಿಯನ್ನು ಬೆಳೆಸಿಕೊಳ್ಳಬೇಕೆಂಬುದು ವಿಶ್ವರೂಪದರ್ಶನದ ಉದ್ದೇಶ. ಆಗ ವಿಶ್ವವು ಒಂದು ಕ್ರೀಡೆಯಾಗಿ ಕಂಡುಬರುತ್ತದೆ. ಸ್ವಾಮಿ ವಿವೇಕಾನಂದರು ಸುಂದರವಾಗಿ ವಿವರಿಸುತ್ತಾರೆ: ದೇವರು ಪರಿಪೂರ್ಣ, ಅವನಿಗೆ ಯಾವ ಕೊರತೆಯೂ ಇಲ್ಲ. ಯಾವುದೋ ಒಂದು ಉದ್ದೇಶದಿಂದ ಅವನು ಸೃಷ್ಟಿಸುತ್ತಿರುವನು ಎಂಬ ಕಥೆ, ಕಥೆಯ ದೃಷ್ಟಿಯಿಂದ ಚೆನ್ನಾಗಿರಬಹುದೇ ಹೊರತು ಅನ್ಯಥಾ ಅಲ್ಲ. ಇದೆಲ್ಲ ನಿಜವಾಗಿ ಆಟ, ಸೃಷ್ಟಿ ಎಂಬುದೊಂದು ಒಂದು ದೊಡ್ಡ ತಮಾಷೆಯಾಗಿರಬೇಕು. ನೀವು ದರಿದ್ರರಾದರೆ ಅದನ್ನು ಒಂದು ತಮಾಷೆಯಂತೆ ನೋಡಿ, ಶ್ರೀಮಂತ ರಾದರೆ ಶ್ರೀಮಂತತನವನ್ನು ಒಂದು ತಮಾಷೆಯಂತೆ ಭಾವಿಸಿ. ಅಪಾಯ ಬಂದರೆ ಅದೂ ಒಂದು ದೊಡ್ಡ ತಮಾಷೆಯೇ, ಸಂತೋಷ ಬಂದರೆ ಅದೂ ಸ್ವಲ್ಪ ದೊಡ್ಡ ತಮಾಷೆಯೇ. ಪ್ರಪಂಚ ಒಂದು ಕ್ರೀಡಾಭೂಮಿ. ನಾವೆಲ್ಲ ದೊಡ್ಡ ತಮಾಷೆಯಲ್ಲಿ ನಿರತರಾಗಿರುವೆವು, ಆಟದಲ್ಲಿ ನಿರತರಾಗಿರುವೆವು. *(ಕೃತಿಶ್ರೇಣಿ, ೧.೨೪೪)*

ಜಗತ್ತನ್ನು ಅದರ ವೈರುಧ್ಯಗಳೊಂದಿಗೆ ಸಂಪೂರ್ಣವಾಗಿ ಸ್ವೀಕರಿಸುವಂತೆ, ನಮ್ಮ ವ್ಯಕ್ತಿತ್ವವನ್ನೂ ಸಂಪೂರ್ಣವಾಗಿ ಸ್ವೀಕರಿಸಬೇಕು. ನಮ್ಮಲ್ಲೂ ಅನೇಕ ವೈರುಧ್ಯಗಳಿವೆ. ನಾನು ಅಸಹ್ಯಪಡುವಂತಹ, ದಿಗಿಲನ್ನುಂಟುಮಾಡುವಂತಹ, ನಮ್ಮ ಆತ್ಮ-ಗೌರವವನ್ನು ಕುಂಠಿಸುವಂತಹ ಅನೇಕ ಭಾವವಿಕಾರಗಳು ನಮ್ಮಲ್ಲಿವೆ. ನಾವು ಅವನ್ನು ಮರೆಮಾಚಲು ಪ್ರಯತ್ನಿಸುತ್ತೇವೆ, ಅವುಗಳನ್ನು ನಾವು ನೋಡುವುದಕ್ಕೇ ಇಷ್ಟಪಡುವುದಿಲ್ಲ. ಇದರಿಂದ ಸಮಸ್ಯೆ ಇನ್ನೂ ಉಲ್ಬಣವಾಗುತ್ತದೆ, ವ್ಯಕ್ತಿತ್ವದಲ್ಲಿ ಒಡಕು ಉಂಟಾಗುತ್ತದೆ. ನಾವು ವ್ಯಕ್ತಿತ್ವವನ್ನು ಸಮಗ್ರವಾಗಿ ಸ್ವೀಕರಿಸಬೇಕು. ಆಗ ಎಲ್ಲ ದ್ವಂದ್ವಗಳು ಅರ್ಥಪೂರ್ಣವಾಗುತ್ತವೆ, ತಮ್ಮ ವೈರುಧ್ಯವನ್ನು ಕಳೆದುಕೊಳ್ಳುತ್ತವೆ. ನಕಾರಾತ್ಮಕವೂ ಸಕಾರಾತ್ಮಕವಾಗುತ್ತದೆ. ಒಂದು ವರ್ಣಚಿತ್ರದಲ್ಲಿ ಹೊರವಲಯದ ಅನೇಕ ಗೆರೆಗಳು, ವರ್ಣವೈವಿಧ್ಯಗಳು ಮೊದಲನೋಟಕ್ಕೆ ನಮಗೆ ಅರ್ಥಹೀನವಾಗಿ ಕಾಣಬಹುದು. ಆದರೆ ವರ್ಣಚಿತ್ರದ ಒಟ್ಟು ಅರ್ಥ ನಮಗೆ ಗೋಚರಿಸಿದಾಗ ಎಲ್ಲವೂ ಅರ್ಥಪೂರ್ಣವಾಗುತ್ತವೆ. ಹೀಗೆಯೇ ಎಲ್ಲವನ್ನೂ ಅರ್ಥಪೂರ್ಣವಾಗಿ ಸ್ವೀಕರಿಸಿದಾಗ ಇಡೀ ವ್ಯಕ್ತಿತ್ವವೂ ಅರ್ಥಪೂರ್ಣವಾಗುತ್ತದೆ. ಆಗ ವ್ಯಕ್ತಿಗೆ ತಾನಿರುವ ಸಂಸ್ಥೆಯೂ ಅರ್ಥಪೂರ್ಣವಾಗುತ್ತದೆ, ಸಮಾಜವೂ ಅರ್ಥಪೂರ್ಣವಾಗುತ್ತದೆ, ಅನಂತರ ಇಡೀ ಜಗತ್ತು ಅರ್ಥಪೂರ್ಣವಾಗುತ್ತದೆ. ತನ್ನ ವ್ಯಕ್ತಿತ್ವವೇ ಗೊಂದಲಮಯವಾಗಿರುವಾಗ ಎಲ್ಲವೂ ಗೊಂದಲಮಯವಾಗಿಯೇ ಕಾಣುತ್ತದೆ. ವ್ಯಷ್ಟಿಯು ಸಮಷ್ಟಿಯಲ್ಲಿ ತನ್ನ ಅರ್ಥಪೂರ್ಣವಾದ ಅಸ್ತಿತ್ವವನ್ನು ಕಂಡುಕೊಳ್ಳುವುದೇ ಧರ್ಮ.

ನಾವು ಭಗವಂತನ ಸೌಮ್ಯರೂಪವನ್ನು ಇಷ್ಟಪಡುತ್ತೇವೆ, ಅದನ್ನೇ ಪೂಜಿಸುತ್ತೇವೆ ಕೂಡ. ಅಂದರೆ ಪ್ರಪಂಚದ ಸೌಮ್ಯಭಾಗವನ್ನು ಮಾತ್ರ ಸ್ವೀಕರಿಸಿ ರೌದ್ರಭಾಗದ ಕಡೆ ಕಣ್ಮುಚ್ಚಲು ಇಷ್ಟಪಡುತ್ತೇವೆ ಎಂದರ್ಥ. ನಾವು ಎರಡನ್ನೂ ಸ್ವೀಕರಿಸಬೇಕೆಂದಾದರೆ ರೌದ್ರ ಬೀಭತ್ಸ ರೂಪವನ್ನೂ ನಾವು ಪೂಜಿಸಬೇಕು. ಮುಂದೆ ಎರಡನ್ನೂ ಮೀರಿಹೋಗಿ ನಿರಪೇಕ್ಷ ಸತ್ಯದಲ್ಲಿ ನೆಲೆಗೊಳ್ಳಬೇಕು. ಹಿಂದೆ ಭಗವಂತನ ರುದ್ರಭಯಂಕರ ರಾಕ್ಷಸೀ ರೂಪವನ್ನು ಪೂಜಿಸುವ ಸಂಪ್ರದಾಯವಿತ್ತು. ಅಂತಹ ದೇವತೆಗಳಿಗೆ ನರಬಲಿ ಪಶುಬಲಿ ನೀಡಲಾಗುತ್ತಿತ್ತು. ಅಂತಹ